ಪ್ರಿಯವಾದ ಮೀನನ್ನು ಅರ್ಪಿಸಿಲ್ಲ). ಭಾಷಣಕಾರರು ಎಲ್ಲೇ ಹೋಗಲಿ, ಆಯಾ ಭಾಗದ ಬೆಳೆ ಮತ್ತು ಆಹಾರ ಸಂಸ್ಕೃತಿಯನ್ನು ಹೊಗಳುವುದು ಉಚಿತ. ಜನ ಕೊಡುವ ಪ್ರೀತಿಯನ್ನು ಒಲ್ಲೆನ್ನುವುದಕ್ಕೆ ನಾವೆಷ್ಟರವರು? ಕರ್ನಾಟಕದ ಬಹುತ್ವವನ್ನು ಪದಗಳಲ್ಲಿ ಮಾತ್ರವಲ್ಲ, ಪದಾರ್ಥದಲ್ಲೂ ಸವಿಯಬೇಕು. ಹಾಗೆಂದು ನಂಬಿದ ನನಗೆ ಆಘಾತವೂ ಆಗಿರುವುದುಂಟು. ಅದೊಂದು ಶಿಕ್ಷಕರ ದಿನಾಚರಣೆ. ಸಂಘಟಕರು ಟ್ರ್ಯಾಕ್ಸಿ ಮಾಡಿದ್ದರಿಂದ ಮಡದಿಯನ್ನೂ ಕರೆದೊಯ್ದಿದ್ದೆ. ಭಾಷಣದ ಬಳಿಕ ನಮ್ಮಿಬ್ಬರನ್ನು ಒಟ್ಟಿಗೆ ಕೂರಿಸಿ ಮರ್ಯಾದೆ ಮಾಡಿದರು. ನನ್ನ ಹೆಗಲಿಗೆ ಶಾಲು ಬಿತ್ತು. ಇವಳ ಕೈಗೆ ಪೊಟ್ಟಣ. ಕೂಡಲೇ ಸಭೆಯಲ್ಲಿದ್ದ ಹಿರಿಯರು ಎದ್ದು 'ಏ, ಅಮ್ಮನಿಗೆ ಸೀರೆಬಿಚ್ಚಿ ಹಾಕರೊ' ಎಂದು ಜೋರಾಗಿ ಒದರಿದರು. ಈ ಊರಿನ ಸಂಪ್ರದಾಯ ಎಂಥದ್ದೊ ಏನೊ? ಭಾಷಣಕಾರರು ಆಯಾ ಸೀಮೆಯ ಗೌರವ ಸಮರ್ಪಣ ರಿವಾಜನ್ನು ಮೊದಲೇ ಅರಿತಿದ್ದರೆ ಒಳ್ಳೆಯದು. ನಾನು ನಡುಗಿ ಹೋದೆ. ಆತಂಕದಿಂದ ದ್ರೌಪದಿಯ ಮುಖ ನೋಡಿದೆ. ನಿರಾಳ ನಗು ಬೀರುತ್ತ ಕೂತಿದ್ದಾಳೆ. ಅಷ್ಟರಲ್ಲಿ ಯಾರೊ ಮಹಿಳೆ ವೇದಿಕೆ ಹತ್ತಿ ಇವಳ ಕೈಲಿದ್ದ ಪೊಟ್ಟಣವನ್ನು ಇಸಿದುಕೊಂಡು, ಅದರೊಳಗಿದ್ದ ಇಳಕಲ್ ಸೀರೆಯನ್ನು ಬಿಚ್ಚಿ ಹೊದಿಸಿದರು. ಸಮಾಧಾನದ ನಿಟ್ಟುಸಿರಿಟ್ಟೆ.

ನನ್ನ ಕಸುಬು ವಾಕ್ ಜಗತ್ತಿನದು. ವಿದ್ಯಾರ್ಥಿಗಳ ಮುಂದೆ ನಿಂತು ಮಾತಾಡುವಾಗ ಹೃದಯ ಬಿಚ್ಚಿಕೊಳ್ಳುತ್ತದೆ. ಸಭೆಗಳಲ್ಲಿ ಮಾತಾಡುವಾಗ ಹುಸಿ ನುಡಿಯಬೇಕಾಗುತ್ತದೆ. ನಟಿಸಬೇಕಾಗುತ್ತದೆ. ನಗಿಸಬೇಕಾಗುತ್ತದೆ. ಅಷ್ಟಕ್ಕೂ ಹೆಚ್ಚಿನ ಜನ, ಪೀಡೆಯಂತಿರುವ ಭಾಷಣ ಬೇಗ ಮುಗಿದು ನಂತರ ಶುರುವಾಗುವ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಕಾಯುತ್ತಿರುತ್ತಾರೆ. ಜನಪ್ರಿಯ ಭಾಷಣದಲ್ಲಿ ಖ್ಯಾತರಾದ ಕೆಲವು ಪ್ರತಿಭಾವಂತರು, ಜನರನ್ನು ಮೆಚ್ಚಿಸುತ್ತ ಕರೆದ ಕಡೆಯೆಲ್ಲ ಹೋಗಿ ಸರ್ವನಾಶ ಆಗಿದ್ದಾರೆ. ಭಾಷಣ ಒಂದು ಕಲೆ ಮಾತ್ರವಲ್ಲ, ಹೊಣೆ ಕೂಡ. ಭಾಷಣಗಳ ಮೂಲಕ ನಮ್ಮ ಹಿರೀಕರು ನಾಡವರಲ್ಲಿ ಸಾಹಿತ್ಯ ಸಂವೇದನೆ ರೂಪಿಸಿದ್ದಾರೆ. ಸಮಾಜ ಸುಧಾರಣೆಗೆ ಜನರನ್ನು ಸಿದ್ಧಗೊಳಿಸಿದ್ದಾರೆ. ಚಳವಳಿಯ ಕೆಚ್ಚನ್ನು ಉಕ್ಕಿಸಿದ್ದಾರೆ. ಬಿ.ಎಂ.ಶ್ರೀ., ಶಿವರಾಮ ಕಾರಂತ, ಕು.ವೆಂ.ಪು., ಅ.ನ.ಕೃ., ಕಿ.ರಂ. ನಾಗರಾಜ, ಎಂ.ಡಿ. ನಂಜುಂಡಸ್ವಾಮಿ ಭಾಷಣ ಮಾಡದೆ ಹೋಗಿದ್ದರೆ ಕರ್ನಾಟಕ ಹೇಗಿರುತ್ತಿತ್ತೊ? ಇವರ ಭಾಷಣಗಳು ನಾಡನ್ನು ಕಟ್ಟಿದವು. ನನ್ನಂತಹವರು ಸೀಜನ್ನಿಗೆ ತಕ್ಕ ಹಣ್ಣು ಮಾರುವ ಬೀದಿ ವ್ಯಾಪಾರಿಯಂತೆ. ಆದರೆ ಈ ವ್ಯಾಪಾರಕ್ಕಾಗಿ ಎಷ್ಟೊಂದು ಕಷ್ಟಪಡುತ್ತೇನೆ? ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ. ಆದರೇನಂತೆ, ಅಕಸ್ಮಾತ್ ಸಿಗುವ ಸಾಸಿವೆ ಸುಖ, ಇಡೀ ಬಾಳಿನ ಮಧುರ ನೆನಪಾಗಿ ಉಳಿಯಬಹುದು. ಮೇಲಾಗಿ, ಡಿಸ್‌ಚಾರ್ಜ್ ಆಗದ ಸರ್ಕಾರಿ ಆಸ್ಪತ್ರೆಯ ರೋಗಿಯಂತೆ ಮನೆಯವರ ಎದೆಮೇಲೆ ಕೂತು ರೇಜಿಗೆ ಹುಟ್ಟಿಸುವುದಾದರೂ ಯಾಕೆ? ಭಾಷಣಕ್ಕಾಗಿ ತಾತ್ಕಾಲಿಕ ಮನೆ ಬಿಡುವುದರಿಂದ ಕುಟುಂಬದ ಸದಸ್ಯರಿಗೆ ಸರಾಗ ಉಸಿರಾಡುವುದಾದರೆ ಆಡಲಿ. ಭಾಷಣಕ್ಕೆ ಹೋದರೆ ಹೊಸ ಊರು ನೋಡಬಹುದು. ಹೊಸ ಜನ ಭೇಟಿಯಾಗುವರು. ನನ್ನ ಪಾಲಿಗೆ ಅದೊಂದು ಅನುಭವದ ಮೀನು ಹಿಡಿಯುವ ಕೂಳಿ. ಹಾಗೆ ಕಷ್ಟಪಟ್ಟು ಸಂಗ್ರಹಿಸಿ ತಂದ ಅನುಭವದ ಮೇಲೆ ಕಾವುಕೂತು ನಾಲ್ಕು ಸಾಲು ಗೀಚುವಾಗ, ಕೋಣೆಯ ಮೂಲೆಯಲ್ಲಿ ಕೂತು ಇಷ್ಟವಾದ ಪುಸ್ತಕ ಓದುತ್ತ, ಗಂಟೆಗೊಂದು ಚಹ ಹೀರುತ್ತ, ಬೇಸರವಾದರೆ ತೋಟದಲ್ಲೊ ಅಡುಗೆ ಮನೆಯಲ್ಲೊ ನೆರವಾಗುವಾಗ, ಸಗ್ಗಕ್ಕೆ ಕಿಚ್ಚು ಹಚ್ಚಬೇಕೆನಿಸುತ್ತದೆ. ಆದರೆ ಇದೆಲ್ಲ ಒಂದು ವಾರದ ತನಕ ಮಾತ್ರ. ಯಾಕೊ ಭಾಷಣಕ್ಕೆ